ಸಂಪುಟ : 40 ಸಂಚಿಕೆ:335 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 03 ಜನವರಿ 2018 ಬುಧವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com

ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿ ನಿವೃತ್ತ ನ್ಯಾಯಮೂರ್ತಿ ಡಿ.ಎಚ್. ವಘೇಲಾ ನೇಮಕ

ವಿವರ : ಪುಟ 10

ಆರ್‌ಸಿಬಿ ತಂಡಕ್ಕೆ ಬ್ಯಾಟಿಂಗ್‌ಗೆ ಗ್ಯಾರಿ ಕರ್ಸ್ಟನ್, ಬೌಲಿಂಗ್‌ಗೆ ಆಶಿಶ್ ನೆಹ್ರಾ ಕೋಚ್ ಆಗಿ ಆಯ್ಕೆ

ವಿವರ : ಪುಟ 5

ಭಾರತದಲ್ಲಿ ಹೊಸ ವರ್ಷದಂದು 69 ಸಾವಿರ ಮಕ್ಕಳ ಜನನ : ಯುನಿಸೆಫ್

ವಿವರ : ಪುಟ 10

ಬಿಟ್ ಕಾಯಿನ್ ಭಾರತದಲ್ಲಿ ಮಾನ್ಯವಲ್ಲ, ವಹಿವಾಟು ನಡೆಸುವವರೇ ಜವಾಬ್ದಾರಿ: ಅರುಣ್‌ಜೇಟ್ಲಿ

ವಿವರ : ಪುಟ 10

Gold 916 ₹ 2785/–
Silver ₹41000/–
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

ವೆಂಕೋಬ್ ಕೋಳಿ ಧಾರಣೆ
ಫಾರಂ ಕೋಳಿ 1 ಕೆಜಿಗೆ ರೂ.86/-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 106/-
ವಿತ್‌ಸ್ಕಿನ್ ರೂ.154/- ವಿತೌಟ್ ಸ್ಕಿನ್ ರೂ.175/-
ಡಜನ್ ಮೊಟ್ಟೆಗೆ ರೂ.50/-

# ಆಸ್ಪತ್ರೆಗಳ ಮುಷ್ಕರಕ್ಕೆ ಮಿಶ್ರ ಪ್ರತಿಕ್ರಿಯೆ

## ರಾಷ್ಟ್ರೀಯ ವೈದ್ಯಕೀಯ ಆಯೋಗ ಮಸೂದೆ ವಿರುದ್ಧ ತಿರುಗಿಬಿದ್ದ ವೈದ್ಯರ ಸಂಘ

ಬೆಂಗಳೂರು

ರಾಜ್ಯ ಸರ್ಕಾರದ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣದ ವಿಧೇಯಕದ ಬಳಿಕ ಕೇಂದ್ರ ಸರ್ಕಾರದ ರಾಷ್ಟ್ರೀಯ ವೈದ್ಯಕೀಯ ಆಯೋಗ ಮಸೂದೆ ವಿರುದ್ಧ ವೈದ್ಯಕೀಯ ಸಂಘ ತಿರುಗಿ ಬಿದ್ದಿದೆ. ಈ ನಿಟ್ಟಿನಲ್ಲಿ ಹೊರರೋಗಿಗಳ ಚಿಕಿತ್ಸಾ ವಿಭಾಗವನ್ನು ಮುಚ್ಚುವ ಮೂಲಕ ಮತ್ತೊಮ್ಮೆ ಪ್ರತಿಭಟನೆ ನಡೆಸುತ್ತಿದೆ. ಇದರಿಂದಾಗಿ ರೋಗಿಗಳು ಪರದಾಡಬೇಕಾಗಿದೆ.

ಹೌದು.., ಇತ್ತೀಚೆಗಷ್ಟೇ ಕೆಪಿಎಂಇ ಮಸೂದೆ ವಿರುದ್ಧ ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಘಟಕ ರಾಜ್ಯಾದ್ಯಂತ ಒಪಿಡಿ ಸೇವೆ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿತ್ತು. ಅದರ ಬೆನ್ನಲ್ಲೇ ಇದೀಗ ಕೇಂದ್ರ ಸರ್ಕಾರ ತರಲು ಹೊರಟಿರುವ ಎಂಎನ್ಸಿ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದೆ. ಬೆಂಗಳೂರಿನ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಸೇವೆ ಬಂದ್ ಆಗಿದೆ. ಬೆಳಗ್ಗೆ 6 ಗಂಟೆ ಯಿಂದ ಸಂಜೆ 6 ರ ತನಕ ಒಪಿಡಿ ಸೇವೆ ಸ್ಥಗಿತಗೊಳ್ಳಲಿದೆ. ಕಿಮ್ಸ್ ಆಸ್ಪತ್ರೆಯಲ್ಲಿ ಒಪಿಡಿ ಸೇವೆ ಸ್ಥಗಿತಗೊಳಿಸಲಾಗಿದೆ ಎನ್ನುವ ಮಾತುಗಳು ಕೇಳಿಬಂದಿವೆ. ಆದರೆ ಈ ಬಗ್ಗೆ ಎಲ್ಲೂ ಫಲಕಗಳನ್ನು ಹಾಕಿಲ್ಲ, ಇದರಿಂದ ಜನರಲ್ಲಿ ಗೊಂದಲ ಸೃಷ್ಟಿಯಾಗಿದೆ.

ಆದರೆ ಮುಷ್ಕರದ ಸಮಯ ಆರಂಭಗೊಂಡ ಬಳಿಕ ವೈದ್ಯರ ಮುಷ್ಕರದಲ್ಲಿ ಒಗ್ಗಟ್ಟು ಇಲ್ಲ ಎನ್ನುವುದು ಬಹಿರಂಗಗೊಂಡಿದೆ. ಆಸ್ಪತ್ರೆಗಳ ನಡುವೆಯೇ ಪರ-ವಿರೋಧದ ಗೊಂದಲಗಳು ವ್ಯಕ್ತವಾಗಿದ್ದು, ಅನೇಕ ಆಸ್ಪತ್ರೆಗಳು ಇಂದಿನ ಮುಷ್ಕರಕ್ಕೆ ಕೈಜೋಡಿಸುತ್ತಿಲ್ಲ ಎಂದು ತಿಳಿದುಬಂದಿದೆ.

ತುಮಕೂರಿನಲ್ಲಿಯೂ ಖಾಸಗಿ ಆಸ್ಪತ್ರೆಗಳ ಒಪಿಡಿ ವಿಭಾಗ ಬಂದ್ ಆದ ಹಿನ್ನೆಲೆಯಲ್ಲಿ ಹಲವು ಆಸ್ಪತ್ರೆಗಳು ಬಿಕೋ ಎನ್ನುತ್ತಿದ್ದ ದೃಶ್ಯ.

### ವೈದ್ಯರ ಸಂಘಟನೆಗಳಲ್ಲಿ ಒಡಕು?

ಕೆಪಿಎಂಇ ಕಾಯ್ದೆಯ ವಿರುದ್ಧ ಮುಷ್ಕರ ನಡೆದಾಗ ಸಣ್ಣದಾಗಿ ಎದ್ದಿದ್ದ ಅಪಸ್ವರ ಎನ್‌ಎಂಸಿ ಮುಷ್ಕರದಲ್ಲಿ ಎದ್ದು ಕಾಣುತ್ತಿದ್ದು, ವೈದ್ಯರ ನಡುವಿನ ಭಿನ್ನಾಭಿಪ್ರಾಯ ಬಹಿರಂಗಗೊಂಡಿದೆ. ಫನಾ ಮತ್ತು ಐಎಂಎ ನಡುವೆ ಒಕ್ಕೊರಲಿನ ಸಮನ್ವಯ ಇಲ್ಲದಿರುವುದು ಎದ್ದು ಕಾಣುತ್ತಿದೆ. ಐಎಂಎ ಕರೆ ಕೊಟ್ಟಿರುವ ಮುಷ್ಕರಕ್ಕೆ ವೈದ್ಯರು ನೈತಿಕ ಬೆಂಬಲ ಮಾತ್ರ ನೀಡಿದ್ದು, ಹೊರರೋಗಿಗಳ ವಿಭಾಗ ಮುಚ್ಚುತ್ತಿಲ್ಲ, ಈ ಬಗ್ಗೆ ಮಾಹಿತಿ ನೀಡಿರುವ ಖಾಸಗಿ ಆಸ್ಪತ್ರೆಗಳ ಒಕ್ಕೂಟ ಫನಾ, ಒಪಿಡಿ ಮುಚ್ಚುವುದು ಆಯಾ ಆಸ್ಪತ್ರೆಗಳ ಆಡಳಿತ ಮಂಡಳಿಗೆ ಬಿಟ್ಟ ನಿರ್ಧಾರವಾಗಿದೆ. ಖಾಸಗಿ ಆಸ್ಪತ್ರೆಗಳ ಒಕ್ಕೂಟದಿಂದ ಮುಷ್ಕರಕ್ಕೆ ನೈತಿಕ ಬೆಂಬಲ ನೀಡಲಾಗಿದೆಯೇ ಹೊರತು ಯಾರಿಗೂ ಒಪಿಡಿ ಮುಚ್ಚುವಂತೆ ನಿರ್ದೇಶನ ನೀಡಿಲ್ಲವೆಂದು ಸ್ಪಷ್ಟಪಡಿಸಿದೆ.

### ಕಿಮ್ಸ್‌ನಲ್ಲಿ ಚಿಕಿತ್ಸೆ ಲಭ್ಯ

ಕಿಮ್ಸ್ ನಲ್ಲಿ ಒಪಿಡಿ ಸ್ಥಗಿತಗೊಳಿಸಲಾಗಿದೆ ಎನ್ನುವ ಆರೋಪವನ್ನು ಕಿಮ್ಸ್ ವೈದ್ಯಾಧಿಕಾರಿಗಳು ತಳ್ಳಿಹಾಕಿದ್ದಾರೆ. ಮುಷ್ಕರಕ್ಕೆ ನಾವು ಬೆಂಬಲ ನೀಡಿ ಒಪಿಡಿ ಸ್ಥಗಿತಗೊಳಿಸಿಲ್ಲ, ಎಂದಿನಂತೆ ಒಪಿಡಿ ಸೇವೆ ನೀಡಲು ನಿರ್ಧರಿಸಿದ್ದೇವೆ. ರೋಗಿಗಳು ಯಾವುದೇ ಆತಂಕ ಗೊಂದಲ ಇಲ್ಲದೆ ಚಿಕಿತ್ಸೆಗೆ ಬರಬಹುದು ಎಂದು ಮಾಹಿತಿ ನೀಡಿದ್ದಾರೆ.

### ಮುಷ್ಕರಕ್ಕೆ ಸಮ್ಮತಿ, ಒಪಿಡಿ ಮುಚ್ಚಲು ನಿರಾಸಕ್ತಿ

ಖಾಸಗಿ ಆಸ್ಪತ್ರೆಗಳ ಮುಷ್ಕರಕ್ಕೆ ಆಸ್ಪತ್ರೆಗಳ ನಡುವೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇಂದು ಹೊರರೋಗಿಗಳ ವಿಭಾಗ ಮುಚ್ಚುವ ಮೂಲಕ ಪ್ರತಿಭಟಿಸಲು ಐಎಂಎ ನಿರ್ಧಾರ ಕೈಗೊಂಡಿದೆ. ಆದರೆ ಐಎಂಎ ವಾದವನ್ನು ಒಪ್ಪಿ ನೈತಿಕ ಬೆಂಬಲ ಕೊಟ್ಟಿರುವ ಖಾಸಗಿ ಆಸ್ಪತ್ರೆಗಳು ಒಪಿಡಿ ಬಂದ್ ಗೆ ಒಪ್ಪಿಗೆ ನೀಡಲು ನಿರಾಕರಿಸಿವೆ. ರೋಗಿಗಳಿಗೆ ಅನಾನುಕೂಲ ಮಾಡಲು ಖಾಸಗಿ ಆಸ್ಪತ್ರೆಗಳು ನಿರಾಕರಿಸಿದ್ದು, ಎಂದಿನಂತೆ ಆಸ್ಪತ್ರೆಗಳಲ್ಲಿ ಒಪಿಡಿ ಕಾರ್ಯನಿರ್ವಹಿಸಲಿವೆ ಎಂದು ಕಿಮ್ಸ್, ಅಪೋಲೋ, ಫೋರ್ಟಿಸ್, ಎಂ.ಎಸ್

>>> 7ನೇ ಪುಟಕ್ಕೆ

# ಮಹದಾಯಿ, ಮೇಕೆದಾಟು ವಿವಾದ ಪ್ರಧಾನಿ ಮಧ್ಯಸ್ಥಿಕೆಗೆ ಒತ್ತಾಯ

ನವದೆಹಲಿ

ಮಹದಾಯಿ ವಿವಾದದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಕೂಡಲೇ ಮಧ್ಯಸ್ಥಿಕೆ ವಹಿಸಿ ಕರ್ನಾಟಕದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಕಾಂಗ್ರೆಸ್ ಮಂಗಳವಾರ ಲೋಕಸಭೆಯಲ್ಲಿ ಆಗ್ರಹಿಸಿದೆ.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸಂಸದ ಮುದ್ದಹನುಮೇಗೌಡ ಅವರು, ರಾಜ್ಯದ ಜನ ವಿಶೇಷವಾಗಿ ಉತ್ತರ ಕರ್ನಾಟಕದ ಜನ ಕುಡಿಯುವ ನೀರಿಗಾಗಿ ಪರದಾಡುವಂತಹ ಸ್ಥಿತಿ ಇದೆ. ಜನರಿಗೆ ಕುಡಿಯುವ ನೀರು ಪೂರೈಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿ. ಕುಡಿಯುವ ನೀರಿಗಾಗಿ ಉತ್ತರ ಕರ್ನಾಟಕ ಜನರು ಪ್ರತಿಭಟನೆಗಳ ಮೇಲೆ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿದರು.

> ರಾಜ್ಯದ ಜನ ವಿಶೇಷವಾಗಿ ಉತ್ತರ ಕರ್ನಾಟಕದ ಜನ ಕುಡಿಯುವ ನೀರಿಗಾಗಿ ಪರದಾಡುವಂತಹ ಸ್ಥಿತಿ ಇದೆ. ಜನರಿಗೆ ಕುಡಿಯುವ ನೀರು ಪೂರೈಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿ. ಕುಡಿಯುವ ನೀರಿಗಾಗಿ ಉತ್ತರ ಕರ್ನಾಟಕ ಜನರು ಪ್ರತಿಭಟನೆಗಳ ಮೇಲೆ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಬೇಕೆಂದು ಸಂಸದ ಎಸ್.ಪಿ.ಮುದ್ದಹನುಮೇಗೌಡರವರು ಒತ್ತಾಯಿಸಿದರು.

ಕುಡಿಯುವ ನೀರಿನ ವಿಚಾರದಲ್ಲಿ ರಾಜಕೀಯವನ್ನು ಬಿಟ್ಟು ಮಹದಾಯಿ ಮತ್ತು ಮೇಕೆದಾಟು ಎರಡೂ ಯೋಜನೆಗಳ ಜಾರಿಗೆ ಪ್ರಧಾನಿ ಮಧ್ಯಪ್ರವೇಶ ಅಗತ್ಯ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದೀಯ

>>>10ನೇ ಪುಟಕ್ಕೆ

## ಕೋರೆಗಾಂವ್ ವಿಜಯೋತ್ಸವ: ವ್ಯಾಪಿಸಿದ ಹಿಂಸಾಚಾರ

ಪುಣೆ

ಪ್ರತಿಭಟನೆ ವೇಳೆ ಭುಗಿಲೆದ್ದ ಹಿಂಸಾಚಾರದಲ್ಲಿ ಓರ್ವ ಮೃತಪಟ್ಟು ಹಲವು ಪ್ರತಿಭಟನಾಕಾರರು ಗಾಯಗೊಂಡಿರುವ ಘಟನೆ ಮಹಾರಾಷ್ಟ್ರದ ಪುಣೆಯಲ್ಲಿ ನಡೆದಿದೆ. ಗೋರೆಗಾಂವ್‌ನಲ್ಲಿ ನಡೆಯುತ್ತಿದ್ದ ವಿಜಯೋತ್ಸವ ಮೆರವಣಿಗೆ ವೇಳೆ ಕೆಲ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ್ದರಿಂದ ಏರ್ಪಟ್ಟ ಸಂಘರ್ಷ ಹಿಂಸಾಚಾರಕ್ಕೆ ತಿರುಗಿದೆ. ಓರ್ವ ಮೃತಪಟ್ಟು ಹಲವರು ಗಾಯಗೊಂಡಿದ್ದಾರೆ.

## ಜನರನ್ನು ಕೊಂದ ಮಾಜಿ ಸೈನ್ಯಾಧಿಕಾರಿ

ಪೈಲ್ವಾಲ್

ನಿವೃತ್ತ ಸೇನಾಧಿಕಾರಿಯೊಬ್ಬ ಹರಿಯಾಣದ ಪೈಲ್ವಾಲ್‌ನಲ್ಲಿ 6 ಮಂದಿಯನ್ನು ಕಬ್ಬಿಣದ ರಾಡ್ ನಿಂದ ಹತ್ಯೆ ಮಾಡಿ ಪೊಲೀಸರ ಮೇಲೆಯೂ ದಾಳಿ ನಡೆಸಿದ್ದಾನೆ. ಸೈಕೋ ಕಿಲ್ಲರ್‌ನ ನಡತೆಯಿಂದ ಜನತೆ ಆತಂಕಗೊಂಡಿದ್ದು, ನಿವಾಸಿಗಳಿಗೆ ಮನೆಯಿಂದ ಹೊರ ಬರದಂತೆ ಪೊಲೀಸರು ಸೂಚಿಸಿದ ನಂತರ ಆತ ಸೆರೆ ಸಿಕ್ಕಿದ್ದಾನೆ. ನರೇಶ್ ಡಂಕಡ್ ಎಂಬಾತನೇ ಈ ಕೃತ್ಯ ಎಸಗಿರುವ ಆರೋಪಿ.

## ಗಾಯಕ ಗಜಲ್ ಶ್ರೀನಿವಾಸ್ ಬಂಧನ

ಹೈದರಾಬಾದ್

ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ತೆಲುಗು ಗಾಯಕ ಕೆ.ಸಿ.ರಾಜು ಶ್ರೀನಿವಾಸ್ ಎಂಬುವವರನ್ನು ಮಂಗಳವಾರ ಹೈದರಾಬಾದ್ ಪೊಲೀಸರು ಬಂಧಿಸಿದ್ದಾರೆ. ರೇಡಿಯೋ ಜಾಕಿಯಾಗಿರುವ ಮಹಿಳೆಯೊಬ್ಬರು ಶ್ರೀನಿವಾಸ್ ವಿರುದ್ಧ ದೂರು ನೀಡಿದ್ದರು. 76 ಭಾಷೆಗಳಲ್ಲಿ ಹಾಡುವ ಮೂಲಕ ಶ್ರೀನಿವಾಸ್ ಗಿನ್ನಿಸ್ ದಾಖಲೆ ಮಾಡಿದ್ದು, ಮಹಿಳೆಯ ಆರೋಪವನ್ನು ತಳ್ಳಿ ಹಾಕಿದ್ದಾರೆ.

## ಪಾಕಿಸ್ತಾನಕ್ಕೆ ಚೀನಾ ಬೆಂಬಲ

ಬೀಜಿಂಗ್

ಭಯೋತ್ಪಾದನೆ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸುತ್ತಿಲ್ಲ ಎಂದು ಅಮೆರಿಕ ಪಾಕಿಸ್ತಾನದ ವಿರುದ್ಧ ಹರಿಹಾಯ್ದಿದ್ದರೆ, ಇತ್ತ ಚೀನಾ ಪಾಕಿಸ್ತಾನದ ಬೆನ್ನಿಗೆ ನಿಂತಿದೆ. ಉಗ್ರವಾದದ ವಿರುದ್ಧ ಪಾಕಿಸ್ತಾನ ಪರಿಣಾಮಕಾರಿ ಹೋರಾಟ ನಡೆಸುತ್ತಿರುವುದನ್ನು ವಿಶ್ವ ಸಮುದಾಯ ಗುರುತಿಸಬೇಕು ಎಂದು ಚೀನಾ ಹೇಳಿದೆ.

## ಅಂಕು ಡೊಂಕು

ಬಿಜೆಪಿ ಅಧಿಕಾರಕ್ಕೆ ಬಂದರೆ ಮಠಗಳಿಗೆ ಕೋಟಿ ಕೋಟಿನಾ?



ಸ್ವಾಮಿ ಮೋದಿ ಬಂದರೂ ನಿರುದ್ಯೋಗ ಸರಿಪಡಿಸಲಿಲ್ಲ, ನೀವು ನೋಡಿದರೆ ಮಠಗಳಿಗೆ ಕೋಟಿ, ಕೋಟಿಗಳು ಕೊಟ್ಟರೆ ಯುವಕರ ಪಾಡು?.

# 'ಕಾಮಗಾರಿ ಮಾಡದೆ ಅಕ್ರಮ ಬಿಲ್' ಆರೋಪ: ಇಂದು 3 ಕಾಂಕ್ರಿಟ್ ರಸ್ತೆಗಳ ಸ್ಥಳ ತನಿಖೆ

ತುಮಕೂರು

'ಕಾಂಕ್ರಿಟ್ ರಸ್ತೆಗಳ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳದೆಯೇ ತುಮಕೂರು ಮಹಾನಗರ ಪಾಲಿಕೆಯಿಂದ ಅಕ್ರಮವಾಗಿ ಬಿಲ್ ಪಾವತಿ ಮಾಡಲಾಗಿದೆ' ಎಂಬ ಆರೋಪದ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ (ಡಿ.ಯು.ಡಿ.ಸಿ.)ದ ಅಧಿಕಾರಿಗಳು ಜ.3 ರಂದು ಮೂರು ಕಾಂಕ್ರಿಟ್ ರಸ್ತೆಗಳ ಬಗ್ಗೆ ಸ್ಥಳಪರಿಶೀಲನೆ ನಡೆಸಲಿದ್ದಾರೆ.

ಈ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಇಂಜಿನಿಯರ್ ಅವರು ತುಮಕೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ (ಸಂಖ್ಯೆ: ಡಿಯುಡಿಸಿ/ತುಮಪಾ/ಸಿಆರ್ 153/2017-18, ದಿನಾಂಕ: 01-01-2018) ಬರೆದಿದ್ದು, ಈ ವಿಷಯವು ಪಾಲಿಕೆಯ ಇಂಜಿನಿಯರಿಂಗ್ ಶಾಖೆಯಲ್ಲಿ ಸಂಚಲನ ಉಂಟುಮಾಡಿದೆ.

ಮಾಹಿತಿ ಹಕ್ಕು ಕಾರ್ಯಕರ್ತ ಇಮ್ರಾನ್ ಪಾಷ ಅವರು ಸಲ್ಲಿಸಿದ್ದ ದೂರು ಅರ್ಜಿಯ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಈ ಬಗ್ಗೆ ಪರಿಶೀಲಿಸಿ ಸೂಕ್ತ ವರದಿ ಸಲ್ಲಿಸುವಂತೆ ಸೂಚಿಸಿ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಇಂಜಿನಿಯರ್ ಅವರಿಗೆ ಪತ್ರ (ಸಂಖ್ಯೆ: ಡಿಯುಡಿಸಿ/ತುಮಪಾ/ ಸಿಆರ್ 153/ 2017-18, ದಿನಾಂಕ: 20-12-2017) ಬರೆದಿದ್ದ ಹಿನ್ನೆಲೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ ಅವರು ಈ ಕ್ರಮ ಕೈಗೊಂಡಿದ್ದಾರೆ.

ನಗರದ 17 ನೇ ವಾರ್ಡ್ ವ್ಯಾಪ್ತಿಯ 1) ಶಾರದಾ ಕ್ಲಿನಿಕ್‌ನಿಂದ ಮಂಜುರವರ ಮನೆಯವರೆಗೆ ಕಾಂಕ್ರಿಟ್ ರಸ್ತೆ, 2) ಪೊಲೀಸ್ ಹನುಮಂತರಾಯಪ್ಪ ಮನೆಯಿಂದ ಕಾವೇರಿ ಸ್ಕೂಲ್‌ವರೆಗೆ ಕಾಂಕ್ರಿಟ್ ರಸ್ತೆ, 3) ಕಾವೇರಿ ಶಾಲೆ ರಸ್ತೆಯಿಂದ ಬನಶಂಕರಿ ಎರಡನೇ ಹಂತಕ್ಕೆ ಹೋಗುವ ರಸ್ತೆಯವರೆಗೆ ಕಾಂಕ್ರಿಟ್ ರಸ್ತೆ- ಈ ಕಾಮಗಾರಿಗಳ ಬಗ್ಗೆ ಪರಿಶೀಲಿಸಿ ಸೂಕ್ತ ವರದಿಯನ್ನು ಸಲ್ಲಿಸಬೇಕಾಗಿದೆ. ಆದ್ದರಿಂದ ಜ. 3 ರಂದು ಕಾಮಗಾರಿಯ ತಪಾಸಣೆಗಾಗಿ ಮಹಾನಗರ ಪಾಲಿಕೆಗೆ ಆಗಮಿಸುತ್ತಿದ್ದು, ಈ ಕಾಮಗಾರಿಗಳಿಗೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ/ಕಿರಿಯ ಇಂಜಿನಿಯರ್ ಕಾಮಗಾರಿಯ ದಾಖಲೆಗಳೊಂದಿಗೆ ಹಾಜರಿದ್ದು, ಸಹಕರಿಸಲು ಸದರಿ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್ ಕೋರಿದ್ದಾರೆ. ಜೊತೆಗೆ ಸ್ಥಳಪರಿಶೀಲನೆ ಸಂದರ್ಭದಲ್ಲಿ ಹಾಜರಿರುವಂತೆ ದೂರುದಾರ ಇಮ್ರಾನ್‌ಪಾಷ ಅವರಿಗೂ ಪ್ರತ್ಯೇಕ ಪತ್ರ ಬರೆದು ಕೋರಿದ್ದಾರೆ.

> ಜ. 3 ರಂದು ಕಾಮಗಾರಿಯ ತಪಾಸಣೆಗಾಗಿ ಮಹಾನಗರ ಪಾಲಿಕೆಗೆ ಆಗಮಿಸುತ್ತಿದ್ದು, ಈ ಕಾಮಗಾರಿಗಳಿಗೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮತ್ತು ಸಹಾಯಕ/ಕಿರಿಯ ಎಂಜಿನಿಯರ್ ಕಾಮಗಾರಿಯ ದಾಖಲೆಗಳೊಂದಿಗೆ ಹಾಜರಿದ್ದು, ಸಹಕರಿಸಲು ಸದರಿ ಪತ್ರದಲ್ಲಿ ಕಾರ್ಯಪಾಲಕ ಎಂಜಿನಿಯರ್ ಕೋರಿದ್ದಾರೆ.

# ಫೆ.5ರಿಂದ ವಿಧಾನ ಮಂಡಲ ಜಂಟಿ ಅಧಿವೇಶನ

## ಸಿಎಂ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನ

ಬೆಂಗಳೂರು

ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ ಫೆಬ್ರುವರಿ 5 ರಂದು ರಾಜ್ಯಪಾಲರ ಭಾಷಣದೊಂದಿಗೆ ಆರಂಭಗೊಂಡು, ಫೆಬ್ರುವರಿ 9 ರಂದು ರಾಜ್ಯ ಸರ್ಕಾರದ ಉತ್ತರದೊಂದಿಗೆ ಸಮಾಪನಗೊಳ್ಳಲು ರಾಜ್ಯ ಸಚಿವ ಸಂಪುಟ ಸಮ್ಮತಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಹತ್ವಯುತ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಣ್ಣನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ ಬಿ ಜಯಚಂದ್ರ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಐದು ದಿನಗಳ ಜಂಟಿ ಅಧಿವೇಶನದ ನಂತರ, ಫೆಬ್ರವರಿ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಆರನೇ ಹಾಗೂ ತಮ್ಮ ಹದಿಮೂರನೇ ಮುಂಗಡ ಪತ್ರವನ್ನು ಮಂಡಿಸಲಿದ್ದಾರೆ. ಫೆಬ್ರವರಿ 28 ರವರೆಗೆ ಕಲಾಪ ನಡೆಸಲು ಸಚಿವ ಸಂಪುಟ ತೀರ್ಮಾನಿಸಿದೆ.

### ಮುಂಬಡ್ತಿ ಪ್ರಕ್ರಿಯೆ ಮುಂದೂಡಿಕೆ

ರಾಜ್ಯ ಸರ್ಕಾರದ ನಾಗರೀಕ ಸೇವೆಯ ವಿವಿಧ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ವರ್ಗದ ಅಧಿಕಾರಿ ಮತ್ತು ಸಿಬ್ಬಂದಿಯ ಮುಂಬಡ್ತಿ ಪ್ರಕ್ರಿಯೆಯನ್ನು ಜನವರಿ 15 ರ ವರೆಗೆ ಮುಂದೂಡಲು ಸಂಪುಟ ಸಮ್ಮತಿಸಿದೆ. ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಮುಂಬಡ್ತಿಗೆ ಪ್ರಕ್ರಿಯೆಗೆ ತಾತ್ಕಾಲಿಕ ತಡೆ ನೀಡಲು ಸಂಪುಟ ನಿರ್ಧರಿಸಿದೆ.

> ಕೇಂದ್ರ ಸರ್ಕಾರಿ ಸೇವೆಗಳ ಸೌಲಭ್ಯ ಪಡೆಯಲು ಆಧಾರ್ ಜೋಡಣೆ ಕಡ್ಡಾಯ ಮಾಡಿರುವ ಮಾದರಿಯಲ್ಲೇ ರಾಜ್ಯ ಸರ್ಕಾರಿ ಸೇವೆಗಳ ಸೌಲಭ್ಯಗಳನ್ನು ಪಡೆಯಲು ಅನುವಾಗುವಂತೆ ಕರ್ನಾಟಕ ರಾಜ್ಯ ಆಧಾರ್ ಆರ್ಥಿಕ ಮತ್ತು ಇತರ ಸಹಾಯಧನಗಳ ವಿತರಣೆ, ಪ್ರಯೋಜನಗಳು ಹಾಗೂ ಸೇವೆಗಳು ವಿಧೇಯಕ–2017 ಕ್ಕೆ ಸಂಪುಟ ಅನುಮೋದನೆ ನೀಡಿದೆ.

### ನ್ಯಾಯಾಧೀಶರ ಸೇವಾವಧಿ ವಿಸ್ತರಣೆ

ರಾಜ್ಯ ಲೋಕಾಯುಕ್ತ ಸಂಸ್ಥೆಯಲ್ಲಿನ ಅಪರ ನಿಬಂಧಕರ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಆರು ನ್ಯಾಯಾಧೀಶರ ಸೇವಾವಧಿಯನ್ನು ಒಂದು ವರ್ಷಗಳ ಅವಧಿಗೆ ವಿಸ್ತರಿಸಲು ಸಂಪುಟ ಅನುಮೋದನೆ ನೀಡಿದೆ.

### ತಿದ್ದುಪಡಿಗೆ ಒಪ್ಪಿಗೆ

ರಾಜ್ಯ ಸರ್ಕಾರಿ ನೌಕರರು ಪತ್ನಿ, ಮಕ್ಕಳು ಹಾಗೂ ತಂದೆ-ತಾಯಿ ಒಳಗೊಂಡಂತೆ ಸ್ಥಿರ ಮತ್ತು ಚರ ಆಸ್ತಿಗಳ ಸವಿವರ ಮಾಹಿತಿಗಳನ್ನು ನಮೂನೆ-4 ರಲ್ಲಿ ಕಡ್ಡಾಯವಾಗಿ ಒದಗಿಸಲು ಕರ್ನಾಟಕ ಲೋಕಾಯುಕ್ತ ಕಾಯಿದೆ-1985 ರ ಪರಿಚ್ಛೇಧ 7 ರ ತಿದ್ದುಪಡಿಗೆ ಸಂಪುಟ ಒಪ್ಪಿಗೆ ನೀಡಿದೆ.

### ವಿಧೇಯಕಕ್ಕೆ ಅನುಮೋದನೆ

ಕೇಂದ್ರ ಸರ್ಕಾರಿ ಸೇವೆಗಳ ಸೌಲಭ್ಯ ಪಡೆಯಲು ಆಧಾರ್ ಜೋಡಣೆ ಕಡ್ಡಾಯ ಮಾಡಿರುವ ಮಾದರಿಯಲ್ಲೇ ರಾಜ್ಯ ಸರ್ಕಾರಿ ಸೇವೆಗಳ ಸೌಲಭ್ಯಗಳನ್ನು ಪಡೆಯಲು ಅನುವಾಗುವಂತೆ ಕರ್ನಾಟಕ ರಾಜ್ಯ ಆಧಾರ್ ಆರ್ಥಿಕ ಮತ್ತು ಇತರ ಸಹಾಯಧನಗಳ ವಿತರಣೆ, ಪ್ರಯೋಜನಗಳು ಹಾಗೂ ಸೇವೆಗಳು ವಿಧೇಯಕ-2017 ಕ್ಕೆ ಸಂಪುಟ ಅನುಮೋದನೆ ನೀಡಿದೆ.

### ಮಾರ್ಗಸೂಚಿಗಳ ಬದಲಾವಣೆಗೆ ಒಪ್ಪಿಗೆ

ಮುಖ್ಯಮಂತ್ರಿಯವರ ಸ್ವಯಂ ಉದ್ಯೋಗ ಯೋಜನೆಯ ಮಾರ್ಗಸೂಚಿಗಳಿಗೆ ಬದಲಾವಣೆ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಬದಲಾದ ಮಾರ್ಗಸೂಚಿಗಳಂತೆ ಫೋಟೋ ಸ್ಟೂಡಿಯೋ, ಝುರಾಕ್ಸ್ ಅಂಗಡಿ, ಸಣ್ಣ ಪ್ರಮಾಣದ ಹೋಟೆಲ್‌ಗಳು, ಸ್ವ-ಉದ್ಯೋಗ ಆರಂಭಿಸಲು ಹತ್ತು ಲಕ್ಷ ರೂ ಬಂಡವಾಳ ಒದಗಿಸಲು ಸಂಪುಟ ಸಮ್ಮತಿಸಿದೆ.

### ಕಲ್ಮಷಗಳ ತ್ಯಾಜ್ಯ ಸಂಸ್ಕರಣಾ ಮತ್ತು ನಿರ್ವಹಣಾ ನೀತಿ

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದ ಹತ್ತು ನಗರಗಳಲ್ಲಿ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆ ಮಾಡಲು ಕಲುಷಿತ ನೀರು ಸಂಸ್ಕರಣೆ ಮತ್ತು ನಿರ್ವಹಣೆಗೆ ಅನುವಾಗುವಂತೆ ಕಲ್ಮಷಗಳ ತ್ಯಾಜ್ಯ ಸಂಸ್ಕರಣಾ ಮತ್ತು ನಿರ್ವಹಣಾ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಲು ಸಂಪುಟ ಸಮ್ಮತಿಸಿದೆ. ಮೈಸೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಡಾ ಬಿ. ಆರ್. ಅಂಬೇಡ್ಕರ್ ಭವನ ಕಾಮಗಾರಿಗಳಿಗೆ ಪರಿಷ್ಕೃತ 20.60 ಕೋಟಿ ಅಂದಾಜು ವೆಚ್ಚಕ್ಕೆ ಸಂಪುಟವು ಆಡಳಿತಾತ್ಮಕ ಅನುಮೋದನೆ ನೀಡಿದೆ.

## ಸರಕು ಮತ್ತು ಸೇವಾ ತೆರಿಗೆ:ಇನ್ನೂ ನಿವಾರಣೆಯಾಗದ ಗೊಂದಲಗಳು

# ಭರಪೂರ ಸುತ್ತೋಲೆಗಳು, ಅಧಿಕಾರಿಗಳಿಗೇ ಗೊತ್ತಿಲ್ಲ

(ನಿನ್ನೆ ಸಂಚಿಕೆಯಿಂದ)

ತುಮಕೂರು

ತೆರಿಗೆ ಕ್ಷೇತ್ರಕ್ಕೆ ಬಂದರೆ ಕರ್ನಾಟಕದ ವಾಣಿಜ್ಯ ತೆರಿಗೆಯಲ್ಲಿ ಉತ್ತಮ ಅನುಭವಿಗಳಿದ್ದಾರೆ. ಉತ್ತಮ ಅಧಿಕಾರಿಗಳೂ ಇದ್ದಾರೆ. ಇಡೀ ರಾಷ್ಟ್ರಕ್ಕೆ ಕರ್ನಾಟಕದ ಅಧಿಕಾರಿ ಗಳು ಮಾದರಿಯಾಗಿದ್ದಾರೆ. ಇವರನ್ನು ಉಪಯೋಗಿಸಿಕೊಂಡು ವ್ಯವಸ್ಥೆಯ ಸುಧಾರಣೆಗಳ ಬಗ್ಗೆ ಗಮನ ಹರಿಸಬೇಕು. ಈ ಜಿ.ಎಸ್.ಟಿ. ವ್ಯವಸ್ಥೆ ಜಾರಿಯ ಲೋಪದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸದೇ ಇರುವುದು ಒಂದು ಕೊರತೆಯಾದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳ ನಡುವೆ ಇರುವ ಸಮನ್ವಯದ ಕೊರತೆ ಮತ್ತೊಂದು ಕಾರಣ. ಜಿ.ಎಸ್.ಟಿ. ಕೌನ್ಸಿಲ್‌ನಲ್ಲಿ ಕರ್ನಾಟಕದವರನ್ನು ಉಪಯೋಗಿಸಿಕೊಳ್ಳಬೇಕಿದೆ. ಈ ಕೌನ್ಸಿಲ್ ಮಂಡಲಿಯಲ್ಲಿ ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಇವರಿಗೆ ವಾಸ್ತವದ ತಿಳವಳಿಕೆ ಇಲ್ಲ, ನೈಜ ಪರಿಸ್ಥಿತಿಯ ಅವಲೋಕನ ಇಲ್ಲದ ಅಧಿಕಾರಿಗಳಿಂದ ತುರ್ತು ಬದಲಾವಣೆ ಹೇಗೆ ತಾನೇ ಸಾಧ್ಯ ಎನ್ನುತ್ತಾರೆ ತೆರಿಗೆ ಸಮಾಲೋಚಕರಾದ ಎಸ್.ಪ್ರಕಾಶ್.

ಸರ್ಕಾರಿ ಯೋಜನೆಗಳು ಘೋಷಣೆಯಲ್ಲಿ ತುಂಬಾ ಚೆಂದವಾಗಿರುತ್ತವೆ. ಆದರೆ ಅದನ್ನು ಜಾರಿಗೆ ತರುವಾಗ ಬಹಳಷ್ಟು ಲೋಪಗಳಾಗುತ್ತವೆ. ನಮ್ಮ ಸರ್ಕಾರದ ಬಹುತೇಕ ಯೋಜನೆಗಳು ವಿಫಲವಾಗುತ್ತಿರುವುದೇ ಜಾರಿ ವಿಧಾನದಲ್ಲಿ, ಕೇಂದ್ರ ಸರ್ಕಾರದ ಮಹತ್ವದ ಜಿ.ಎಸ್.ಟಿ. ಯೋಜನೆಯು ಕುಂಟುತ್ತಾ ನರಳುತ್ತಿರುವುದು ಇಂತಹುದೇ ವಿಧಾನಗಳಿಂದ. ಸಂಬಂಧಪಟ್ಟ ಅಧಿಕಾರಿಗಳನ್ನು ಇಂತಹ ವಿಷಯಗಳಲ್ಲಿ ತರಬೇತಿಗೊಳಿಸಬೇಕು. ಏನೆಲ್ಲಾ ವಿಧಾನ ಗಳನ್ನು ಅನುಸರಿಸಿದರೆ ಜಾರಿಯಲ್ಲಿ ಸುಲಭತೆ ಕಂಡುಕೊಳ್ಳಬಹುದು ಎಂಬುದನ್ನು ಅವರು ಚಿಂತಿಸಬೇಕು. ಜಿ.ಎಸ್.ಟಿ. ವ್ಯವಸ್ಥೆಯ ಜಾರಿಗಾಗಿ ಸಾಫ್ಟ್ ವೇರ್ ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು ಯಾವುದೋ ಒಂದು ಕಂಪನಿಗೆ ನೀಡಲಾಗಿದೆ. ಆ ಕಂಪನಿ ಅದೆಷ್ಟು ದಿನಗಳ ಅವಧಿಯನ್ನು ತೆಗೆದುಕೊಳ್ಳುವುದೋ ಗೊತ್ತಿಲ್ಲ. ಬದಲಾಗಿ ಎರಡು ಅಥವಾ ಮೂರು ಕಂಪನಿಗಳಿಗೆ ಜವಾಬ್ದಾರಿ ವಹಿಸಿದ್ದರೆ ಈ ವೇಳೆಗಾಗಲೇ ಸಾಫ್ಟ್ ವೇರ್ ಅಭಿವೃದ್ಧಿಯಾಗುತ್ತಿತ್ತು. ಹೋಗಲಿ ಈ ಸಾಫ್ಟ್ ವೇರ್ ಬಳಕೆಯ ಮಾನದಂಡಗಳ ಪರೀಕ್ಷೆಯಾಗಿದೆಯೇ ಎಂದು ನೋಡಿದರೆ ಅದೂ ಸಹ ಸಾಧ್ಯವಾಗಿಲ್ಲ.

ಇವೆಲ್ಲ ಗೊಂದಲಗಳನ್ನು, ಅವ್ಯವಸ್ಥೆಗಳನ್ನು ನೋಡಿಯೇ ತೆರಿಗೆ ವೃತ್ತಿನಿರತರು ಹೇಳು ವುದು ಒಂದೇ ಪದ. ದಿನಾಂಕವನ್ನು ಮುಂದೂಡ ಬೇಡಿ, ಸಾಫ್ಟ್ ವೇರ್ ಅಭಿವೃದ್ಧಿಪಡಿಸಿಕೊಡಿ ಎಂದು.

ನಮ್ಮ ಕಂಪ್ಯೂಟರ್ ಸಾಫ್ಟ್ ವೇರ್‌ಗಳ ಕತೆ ಹೇಗಿದೆ ಎಂಬುದನ್ನು ವಿವರಿಸಬೇಕಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ನಾಡ ಕಛೇರಿ ಅಥವಾ ತಹಸೀಲ್ದಾರ್ ಕಛೇರಿಗಳಲ್ಲಿ ಒಬ್ಬ ರೈತ ತನ್ನ ಜಮೀನಿನ ಪಹಣಿ ಪಡೆಯಲು ಗಂಟೆಗಟ್ಟಲೆ ಕಾಯಬೇಕು. ಅಲ್ಲಿ ಪದೇ ಪದೇ ಸರ್ವರ್ ಕೈಕೊಡುತ್ತದೆ. ಇಂತಹ ವ್ಯವಸ್ಥೆ ಎಲ್ಲಾ

>>> 7ನೇ ಪುಟಕ್ಕೆ

ಮಂಗಳವಾರ ಸಂಜೆ ಪ್ರಗತಿ ವಾಹಿನಿಯಲ್ಲಿ ನಡೆದ ಜಿಎಸ್‌ಟಿ ಕುರಿತ 2ನೇ ದಿನದ ವಿಶೇಷ ಚರ್ಚೆಯಲ್ಲಿ ಎಸ್.ನಾಗಣ್ಣ ಅವರೊಂದಿಗೆ ಎಸ್.ಪ್ರಕಾಶ್, ಫಣೀಂದ್ರ ಭಾಗವಹಿಸಿದ್ದರು.

> ಜಿಎಸ್‌ಟಿ ಬರುವುದಕ್ಕೂ ಮುನ್ನ ವ್ಯಾಟ್ ತೆರಿಗೆ ವ್ಯವಸ್ಥೆ ಇತ್ತು. ಎಷ್ಟೋ ಜನ ವ್ಯಾಟ್ ನೋಂದಣಿ ಇಲ್ಲದೆ ವ್ಯವಹಾರ ಮಾಡುತ್ತಿದ್ದರು. ವ್ಯಾಟ್‌ನಿಂದ ಜಿಎಸ್‌ಟಿಗೆ ಬದಲಾದ ನಂತರ ತಾಂತ್ರಿಕ ಅಡಚಣೆಗಳು ಹೆಚ್ಚಾಗಿವೆ. ಮಾಹಿತಿ ತುಂಬಲು ಇಂಟರ್‌ನೆಟ್ ಕೊರತೆ ಎದುರಾಗುತ್ತಿದೆ. ಜಿಎಸ್‌ಟಿ ನೋಂದಣಿ ಪ್ರಕ್ರಿಯೆ ಆರಂಭವಾದಾಗಲೇ ನಮ್ಮ ತಂತ್ರಾಂಶ ವ್ಯವಸ್ಥೆ ಸಿದ್ಧಗೊಳ್ಳಬೇಕಿತ್ತು. ಆದರೆ ಇಂದಿಗೂ ಆ ವ್ಯವಸ್ಥೆ ಅಭಿವೃದ್ಧಿಯಾಗದೇ ಇರುವುದು ಬಹಳಷ್ಟು ತಲೆನೋವಾಗಿದೆ. ಅಧಿಕಾರಿಗಳಿಗೆ ಸಮರ್ಪಕ ತರಬೇತಿ ಇಲ್ಲ, ಸರಿಯಾದ ಮಾಹಿತಿ ಇಲ್ಲ, ಇದರಿಂದಾಗಿ ಉದ್ಯಮಿಗಳಿಗೆ, ತೆರಿಗೆ ವೃತ್ತಿನಿರತರಿಗೆ ಬಹುದೊಡ್ಡ ಸಮಸ್ಯೆಯಾಗಿದೆ.

# ಖ್ಯಾತ ಹೋಟೆಲ್ ಉದ್ಯಮಿ ಎಂ.ಎಸ್.ವೆಂಕಟಾಚಲ ನಿಧನ

ತುಮಕೂರು

ದ್ವಾರಕ ಹೋಟೆಲ್ ಮಾಲೀಕರೆಂದೇ ತುಮಕೂರು ಜನತೆಗೆ ಹೆಚ್ಚು ಪರಿಚಿತರಾಗಿದ್ದ ಖ್ಯಾತ ಹೋಟೆಲ್ ಉದ್ಯಮಿ ಎಂ.ಎಸ್.ವೆಂಕಟಾಚಲ (90) ಸೋಮವಾರ ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ನಿಧನರಾದರು. ನಾಲ್ವರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಗಾರ್ಡನ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.

ಮೂಲತಃ ಕುಂದಾಪುರ ತಾಲ್ಲೂಕಿನ ಮೂರಂದೂರು ಗ್ರಾಮದ ಎಂ.ಎಸ್.ವೆಂಕಟಾಚಲ ಅವರು 1952ರಲ್ಲಿ ತುಮಕೂರಿಗೆ ಆಗಮಿಸಿ ಚಿಕ್ಕಪೇಟೆಯ ಶ್ರೀ ಆಂಜನೇಯ ದೇವಸ್ಥಾನದ ಬಳಿ ಬೆಂಗಳೂರು ಗಜಾನನ ಭವನ ಹೋಟೆಲ್ ಆರಂಭಿಸಿದರು. 1967ರಲ್ಲಿ ಈಗಿನ ಎಂ.ಜಿ.ರಸ್ತೆಯಲ್ಲಿರುವ ದ್ವಾರಕ ಹೋಟೆಲ್ ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೂ ಗ್ರಾಹಕರ ಆಕರ್ಷಿತ ಹೋಟೆಲ್ ಆಗಿ ಇದು ಮುಂದುವರೆದಿದೆ. 1992 ರಲ್ಲಿ ಶಿವಮೊಗ್ಗದಲ್ಲಿ ಒಂದು ಹೋಟೆಲ್ ಸ್ಥಾಪಿಸಿ ಓರ್ವ ಮಗನಿಗೆ ಅದನ್ನು ವಹಿಸಿದ್ದಾರೆ. 2007ರಲ್ಲಿ ತುಮಕೂರಿನಲ್ಲಿ ದ್ವಾರಕ ರೆಸಿಡೆನ್ಸಿ ಆರಂಭಿಸಿದರು. ತುಮಕೂರು ನಗರ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಅನೇಕ ಹೋಟೆಲ್‌ಗಳು ನಡೆಯುತ್ತಿದ್ದು, ಇವರ ಮಕ್ಕಳು ಅವುಗಳ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷರಾಗಿ, ಸಪ್ತಋಷಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕರಾಗಿ, ತುಮಕೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾಗಿ, ಅಖಿಲ ಕರ್ನಾಟಕ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಕಾರ್ಯಕಾರಿ ಮಂಡಳಿ ನಿರ್ದೇಶಕರಾಗಿ, ತುಮಕೂರು ನಗರ ಪ್ರಥಮ ಹಿಂದೂ ಸಮಾಜೋತ್ಸವ ಕಾರ್ಯಾಧ್ಯಕ್ಷರಾಗಿ, ತುಮಕೂರು ಜಿಲ್ಲಾ ವಿಪ್ರ ಕಲ್ಯಾಣ ನಿಧಿ ಸ್ಥಾಪಕ ಅಧ್ಯಕ್ಷರಾಗಿ, ಹತ್ತು ಹಲವು ಸಂಘಸಂಸ್ಥೆಗಳಲ್ಲಿ ನಿರ್ದೇಶಕರು, ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಯಾವುದೇ ಸಮಾಜ ಸೇವಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ದಾನಿಗಳಾಗಿ ಪ್ರೋತ್ಸಾಹಕಾರರಾಗಿದ್ದರು. ತುಮಕೂರಿನ ಅನೇಕ ಕಾರ್ಮಿಕ ಸಂಘಟನೆಗಳಿಗೆ ಪತ್ರಿಕಾಗೋಷ್ಠಿ, ಸಭೆ ನಡೆಸಲು ಸಭಾಂಗಣವನ್ನು ನೀಡುತ್ತಿದ್ದ ಬಗ್ಗೆ ಕಾರ್ಮಿಕ ಸಂಘಟನೆಗಳ ಮುಖಂಡರು ತುಂಬು ಹೃದಯದಿಂದ ಸ್ಮರಿಸುತ್ತಾರೆ.